# ಕರ್ನಾಟಕ ವಿಧಾನ ಪರಿಷತ್ತು

## ಲಘು ಪ್ರಕಟಣೆ ಭಾಗ – 2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಮಂಗಳವಾರ, 16ನೇ ಡಿಸೆಂಬರ್ 2025

*****

ಸಂಖ್ಯೆ:48

ವಿಧಾನ ಪರಿಷತ್ತಿನ 157ನೇ ಅಧಿವೇಶನದಲ್ಲಿ ದಿನಾಂಕ:08.12.2025ರಂದು ಮಾನ್ಯ ಶಾಸಕರುಗಳಾದ ಶ್ರೀ ಪುಟ್ಟಣ್ಣ, ಶ್ರೀ ಶಶೀಲ್ ಜಿ ನಮೋಶಿ, ಶ್ರೀ ಎಸ್.ವ್ಹಿ. ಸಂಕನೂರ ಮತ್ತು ಶ್ರೀ ಎಸ್.ಎಲ್. ಭೋಜೇಗೌಡ ಅವರುಗಳು ನಿಯಮ 330ರಡಿಯಲ್ಲಿ ಖಾಸಗಿ ಅನುದಾನಿತ/ಅನುದಾನ ರಹಿತ ಶಾಲೆಗಳ ಪ್ರಥಮ ಮಾನ್ಯತೆ ಹಾಗೂ ಮಾನ್ಯತೆ ನವೀಕರಣಕ್ಕೆ ಸಂಬಂಧಿಸಿದಂತೆ ಸರ್ಕಾರವು ಹೊರಡಿಸಿರುವ ಆದೇಶ ಸಂಖ್ಯೆ:ಇಡಿ/709/ಪಿಜಿಸಿ/2017, ದಿನಾಂಕ:08.03.2018ರಲ್ಲಿ ಉಲ್ಲೇಖಿಸಲಾಗಿರುವ ಶಾಲೆಗಳ ಮಾನ್ಯತೆ ನವೀಕರಣದ ನಿಯಮಗಳನ್ನು ಸಡಿಲಿಸಿ ವಿನಾಯಿತಿ ನೀಡಬೇಕೆಂಬ ವಿಷಯದ ಕುರಿತು ಸದನದಲ್ಲಿ ಪ್ರಸ್ತಾಪಿಸಲಾಗಿದ್ದು, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 242(ಎ)ರ ರೀತ್ಯಾ ಈ ಬಗ್ಗೆ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ವಿಶೇಷ ಸದನ ಸಮಿತಿಯನ್ನು ಮಾನ್ಯ ಶಾಸಕರಾದ ಶ್ರೀ ಪುಟ್ಟಣ್ಣ ಅವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ 7 ಮಾನ್ಯ ಶಾಸಕರನ್ನೊಳಗೊಂಡಂತೆ ರಚಿಸಲಾಗಿರುತ್ತದೆ. ಸಮಿತಿಯು ಮೂರು ತಿಂಗಳ ಅವಧಿಯೊಳಗೆ ವರದಿಯನ್ನು ಸಲ್ಲಿಸುವುದು.

ಶ್ರೀಮತಿ/ಶ್ರೀಯುತರುಗಳಾದ:

1. ಎಸ್. ವಿ. ಸಂಕನೂರ
2. ನಿರಾಣಿ ಹಣಮಂತ ರುದ್ರಪ್ಪ
3. ಎಸ್.ಎಲ್. ಭೋಜೇಗೌಡ
4. ಬಲ್ಕೀಸ್ ಬಾನು
5. ರಾಮೋಜಿಗೌಡ
6. ಡಿ.ಟಿ. ಶ್ರೀನಿವಾಸ್
7. ಕೆ. ವಿವೇಕಾನಂದ

...2

ಪರಿಶೀಲನಾಂಶಗಳು

1. ರಾಜ್ಯದಲ್ಲಿ ಖಾಸಗಿ ಅನುದಾನಿತ/ಅನುದಾನ ರಹಿತ ಶಾಲೆಗಳ ಪ್ರಥಮ ಮಾನ್ಯತೆ ಹಾಗೂ ಮಾನ್ಯತೆ ನವೀಕರಣಕ್ಕೆ ಸಂಬಂಧಿಸಿದಂತೆ ಹೊರಡಿಸಿರುವ ಸರ್ಕಾರಿ ಆದೇಶ ಸಂಖ್ಯೆ:ಇಡಿ/709/ಪಿಜಿಸಿ/2017, ದಿನಾಂಕ:07.03.2018 ಮತ್ತು ಸಂಖ್ಯೆ: ಇಡಿ/709/ಪಿಜಿಸಿ/2017 ದಿನಾಂಕ:08.03.2018ರ ರೀತ್ಯಾ ಕರ್ನಾಟಕ ಶಿಕ್ಷಣ ಕಾಯ್ದೆ,2013 ಮತ್ತು ಆರ್.ಟಿ.ಇ ನಿಯಮ,2012ರ ಅಡಿಯಲ್ಲಿ ಆನ್‌ಲೈನ್ ಮೂಲಕ ಸಲ್ಲಿಸಬೇಕಾಗಿರುವ ದಾಖಲಾತಿಗಳನ್ನು ಆಡಳಿತ ಮಂಡಳಿಯವರು ಒದಗಿಸಲು ಅನಾನುಕೂಲವಾಗುತ್ತಿರುವ ಬಗ್ಗೆ ಪರಿಶೀಲಿಸುವುದು;
2. ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದಲ್ಲಿ 15ಮೀ.ಕ್ಕಿಂತ ಕಡಿಮೆ ಎತ್ತರದ ಕಟ್ಟಡಗಳಿಗೆ ಅನ್ವಯಿಸುವುದಿಲ್ಲವೆಂದು ತಿಳಿಸಲಾಗಿದ್ದರೂ ಅದನ್ನು ಅನುಸರಿಸದಿರುವ ಬಗ್ಗೆ ಪರಿಶೀಲಿಸುವುದು;
3. ಶಾಲೆ ನಡೆಸಲು ಜಾಗದ ಕೊರತೆಯಾಗಿರುವ ಶಾಲೆಗಳು, ಸ್ಥಳಾಂತರ ಮತ್ತು ಹಸ್ತಾಂತರವಾಗಿದ್ದರೆ ಅವುಗಳನ್ನು ಹೊಸ ಶಾಲೆಗಳೆಂದು ಪರಿಗಣಿಸುತ್ತಿರುವುದರಿಂದಾಗಿ ಉಂಟಾಗಿರುವ ಅನಾನುಕೂಲಗಳ ಕುರಿತು ಪರಿಶೀಲಿಸುವುದು;
4. ಈಗಾಗಲೆ 2 ಅಥವಾ 3 ಬಾರಿ ಹಸ್ತಾಂತರ ಹಾಗೂ ಸ್ಥಳಾಂತರವಾಗಿರುವ ಶಾಲೆಗಳು ಮತ್ತೊಮ್ಮೆ ಸ್ಥಳಾಂತರ/ಹಸ್ತಾಂತರ ಮಾಡಲು ಅವಕಾಶ ನೀಡದೆ ತಡೆಹಿಡಿದಿರುವ ಬಗ್ಗೆ ಪರಿಶೀಲಿಸುವುದು;
5. ಒಂದೇ ಆವರಣದಲ್ಲಿ ಕೇಂದ್ರ ಪಠ್ಯಕ್ರಮ ಹಾಗೂ ರಾಜ್ಯ ಪಠ್ಯಕ್ರಮದ ಶಾಲೆಗಳು ನಡೆಯುತ್ತಿದ್ದರೆ, ಆ ಶಾಲೆಗಳಿಗೆ ಮಾನ್ಯತೆ ನೀಡದಿರುವುದರ ಬಗ್ಗೆ ಪರಿಶೀಲಿಸುವುದು;
6. ಮಾನ್ಯತೆ ನವೀಕರಣವಾಗದ ಸಂದರ್ಭದಲ್ಲಿ, ಖಾಸಗಿ ಶಾಲೆಯ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳನ್ನು ಸರ್ಕಾರಿ ಶಾಲೆಯಲ್ಲಿ ಖಾಸಗಿಯಾಗಿ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡುವುದರಿಂದ ಉಂಟಾಗುವ ಅನಾನುಕೂಲಗಳ ಬಗ್ಗೆ ಪರಿಶೀಲಿಸುವುದು;
7. ಮಾನ್ಯತೆ ನವೀಕರಣದಿಂದ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಮತ್ತು ಶಿಕ್ಷಣ ಸಂಸ್ಥೆಗಳಿಗೆ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಪರಿಶೀಲಿಸುವುದು;
8. ದಿನಾಂಕ:08.03.2018ರ ಸರ್ಕಾರಿ ಆದೇಶ ಸಂಖ್ಯೆ: ಇಡಿ/709/ಪಿಜಿಸಿ/2017ರಲ್ಲಿನ ನಿಯಮಗಳನ್ನು ಸಡಿಲಿಸುವ ಸಂಬಂಧ ಪುನರ್ ಪರಿಶೀಲಿಸುವುದು;
9. ಇನ್ನಿತರೆ ವಿಷಯಗಳು.

ಕೆ.ಆರ್. ಮಹಾಲಕ್ಷ್ಮಿ
ಕಾರ್ಯದರ್ಶಿ

ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ